ನಿ-330
ಪ್ರ- 90

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ, ಮರಿತಿಬ್ಬೇಗೌಡ, ಪ್ರಕಾಶ್ ಕೆ. ರಾಥೋಡ್ ಹಾಗೂ ಯು.ಬಿ. ವೆಂಕಟೇಶ್ ರವರು ನಿಯಮ 330 ರಡಿ ನೀಡಿರುವ ಸೂಚನಾ ಪತ್ರಕ್ಕೆ ಸರ್ಕಾರದ ಹೇಳಿಕೆ.**

**ವಿಷಯ:-**

ರಾಜ್ಯದಲ್ಲಿ ನೂತನವಾಗಿ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಲು ರಾಜ್ಯ ಸರ್ಕಾರದ ನೀತಿ-ನಿಯಮಗಳ ಪ್ರಕಾರ ಕನಿಷ್ಠ ಮತ್ತು ಗರಿಷ್ಠ ಭೂಮಿಯ ಮಿತಿಯು ದೇಶದ ಇತರೆ ರಾಜ್ಯಗಳಿಗಿಂತ ಹೆಚ್ಚಾಗಿರುವ ಕಾರಣ ರಾಜ್ಯದಲ್ಲಿ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಲು ಅನೇಕ ಶಿಕ್ಷಣ ಸಂಸ್ಥೆಗಳಿಗೆ ಹಿಂಜರಿಕೆಯು ಉಂಟಾಗಿ, ಶಿಕ್ಷಣದಲ್ಲಿ ಪ್ರಪಂಚದಲ್ಲಿಯೇ ಹೆಸರುವಾಸಿಯಾದ ನಮ್ಮ ರಾಜ್ಯವು ಇನ್ನೂ ಹೆಚ್ಚಿನ ಹೆಸರುವಾಸಿಯಾಗಲು ಅಡತಡೆ ಉಂಟಾಗಿದೆ.

ಸರ್ಕಾರದ ನೀತಿ, ನಿಯಮಗಳ ಪ್ರಕಾರ ಖಾಸಗಿ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಲು ಮಹಾನಗರ ಪ್ರದೇಶಗಳಲ್ಲಿ ಕನಿಷ್ಠ 25 ಎಕರೆ ಭೂ ಪ್ರದೇಶ ಮತ್ತು ಗ್ರಾಮೀಣ ಭಾಗದಲ್ಲಿ ಕನಿಷ್ಠ 35 ಎಕರೆ ಭೂಮಿ ಪ್ರದೇಶವು ಅವಶ್ಯಕತೆ ಇರುತ್ತದೆ. ಆದರೆ, ದೇಶದ ವಿವಿಧ ರಾಜ್ಯಗಳಲ್ಲಿ ಈ ಭೂಮಿ ಪ್ರದೇಶದ ಮಿತಿಯು 5 ಎಕರೆ 10 ಎಕರೆ ಭೂಮಿ ಪ್ರದೇಶಕ್ಕೆ ಸೀಮಿತ ಗೊಳಿಸಲಾಗಿದೆ. ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಗೊಳಿಸಲು ಖಾಸಗಿ ವಿಶ್ವವಿದ್ಯಾಲಯಗಳ ಪಾತ್ರವು ಸಹಾ ಮಹತ್ವದ್ದಾಗಿರುತ್ತದೆ. ಆದ್ದರಿಂದ ಪ್ರಸ್ತಾಪಿಸಿರುವ ಖಾಸಗಿ ವಿಶ್ವವಿದ್ಯಾಲಯಗಳನ್ನು ಪರಿವರ್ತಿಸಲು ಇರುವ ಸರ್ಕಾರದ ಭೂಮಿ ಅವಶ್ಯಕತೆಯ ಮಿತಿಯನ್ನು ಕಡಿಮೆಗೊಳಿಸಿ, ನಿಯಮಗಳನ್ನು ಸರಳಗೊಳಿಸುವ ನಿಟ್ಟಿನಲ್ಲಿ ಇರುವ ವಿಚಾರವನ್ನು ಸಾರ್ವಜನಿಕವಾಗಿ ಮಹತ್ವದ ವಿಚಾರವಾಗಿರುವುದರಿಂದ (ದಿನಾಂಕ:10.03.2022ರಂದು) ಸದನದಲ್ಲಿ ನಿಯಮ-330 ಮೇರೆಗೆ ಪ್ರಸ್ತಾಪಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

**ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಹೇಳಿಕೆ:**

ಸರ್ಕಾರಿ ಆದೇಶ ಸಂಖ್ಯೆ: ಇಡಿ 449 ಯುಆರ್‌ಸಿ 2016, ದಿನಾಂಕ: 24-01-2017ರ ಜೊತೆಯಲ್ಲಿ ಓದಲಾದ ತಿದ್ದುಪಡಿ ಸಂಖ್ಯೆ: ಇಡಿ/49/ಯುಆರ್‌ಸಿ/2020, ದಿನಾಂಕ: 18-03-2020ರಲ್ಲಿ ರಾಜ್ಯದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಸಂಬಂಧದಲ್ಲಿ ಹೊಂದಿರಬೇಕಾದ ಜಮೀನಿನ ಬಗ್ಗೆ ಮಾರ್ಗಸೂಚಿಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿರುತ್ತದೆ.

I) 25 Acres of land consisting of a single block or two blocks (Two Split pieces of land) within the limits of Bruhat Bengaluru Mahanagara Palike (BBMP) and Bengaluru Metropolitan Regional Development Authority (BMRDA)

OR

II) 35 Acres of Land within the City Corporation Limits of Mysuru, Mangaluru, Hubballi-Dharwad, Belgaum, Gulburga, Tumkur, Bellari, Shivamoga, Davanagere, and Vijayapura.

OR

III) 50 Acres of land at other places.

ನೆರೆಹೊರೆಯ ರಾಜ್ಯಗಳಲ್ಲಿಯೂ ಸಹ ಖಾಸಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ನಗರ ಪ್ರದೇಶಗಳಲ್ಲಿ 20 ರಿಂದ 30 ಎಕರೆ ಜಮೀನಿನ ಅಗತ್ಯತೆಯನ್ನು ನಿಗದಿಪಡಿಸಲಾಗಿದೆ. ಮುಂದುವರೆದು, ತಮಿಳುನಾಡಿನಲ್ಲಿ ಖಾಸಗಿ

ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು 100 ಎಕರೆ ಜಮೀನಿನ ಅಗತ್ಯತೆ ಇರುತ್ತದೆ. ಹಲವು ರಾಜ್ಯಗಳಲ್ಲಿ ಖಾಸಗಿ ವಿಶ್ವವಿದ್ಯಾಲಯಗಳನ್ನು ಯಾವುದೇ ಪ್ರದೇಶಗಳಲ್ಲಿ ಸ್ಥಾಪಿಸಲು ಏಕರೂಪದ ಜಮೀನಿನ ಪ್ರಮಾಣವನ್ನು ನಿಗದಿಪಡಿಸಲಾಗಿರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಜಮೀನು ಲಭ್ಯತೆ ಹಾಗೂ ಜಮೀನು ಅರ್ಜಿಸುವ ಸಾಧ್ಯತೆಗಳ ಆಧಾರದ ಮೇಲೆ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಜಮೀನಿನ ಅಗತ್ಯತೆಯನ್ನು ನಿಗದಿಪಡಿಸಲಾಗಿರುತ್ತದೆ. ರಾಜ್ಯದಲ್ಲಿರುವ ಬಹುತೇಕ ಎಲ್ಲಾ ಖಾಸಗಿ ವಿಶ್ವವಿದ್ಯಾಲಯಗಳು ಬಹುವಿಧದ ಶೈಕ್ಷಣಿಕ ಕಾರ್ಯಕ್ಷೇತ್ರವನ್ನು ಹೊಂದಿರುವ ಹಾಗೂ ಬಹುವಿಷಯಕ ವೃತ್ತಿಪರ ಕೋರ್ಸುಗಳನ್ನು ನಡೆಸುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದಿಂದ ನಿಗದಿಪಡಿಸಲಾಗಿರುವ ಜಮೀನಿನ ಪ್ರಮಾಣವು ಕನಿಷ್ಠ ಅಗತ್ಯವಾಗುತ್ತದೆ. ರಾಜ್ಯದಲ್ಲಿರುವ ಖಾಸಗಿ ವಿಶ್ವವಿದ್ಯಾಲಯಗಳು ನಡೆಸುವ ಶೈಕ್ಷಣಿಕ ಕಾರ್ಯಚಟುವಟಿಕೆಗಳು, ಸಂಶೋಧನೆಗಳಿಗೆ ಹಾಗೂ ಅವು ಹೊಂದಿರುವ ಶೈಕ್ಷಣಿಕ ಕಾರ್ಯಕ್ಷೇತ್ರಕ್ಕೆ ಪೂರಕವಾದ ಮೂಲಸೌಕರ್ಯ ಅಭಿವೃದ್ಧಿಗೆ ಪರ್ಯಾಪ್ತ ಜಮೀನಿನ ಅವಶ್ಯಕತೆಯಿರುವುದರಿಂದ, ಜಮೀನು ಅಗತ್ಯತೆಯ ಮಿತಿಯನ್ನು ಸಡಿಲಗೊಳಿಸುವುದು ಶೈಕ್ಷಣಿಕ ಹಿತದೃಷ್ಟಿಯಿಂದ ಯುಕ್ತವೆನಿಸುವುದಿಲ್ಲ.

**ಸಂಖ್ಯೆ: ಇ-ಕಛೇರಿ ಸಂಖ್ಯೆ: ಇಡಿ/73/ಯುಆರ್‌ಸಿ/2022**

(ಡಾ॥ ಅಶ್ವತ್ಥ್‌ನಾರಾಯಣ ಸಿ.ಎನ್)

ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆಗಳ ಸಚಿವರು